ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 7-6-2017

# ಪತ್ರಿಕಾ ಆಮಂತ್ರಣ

1. ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದ
ಡಾ. ಪಾರ್ವತಮ್ಮ ರಾಜ್‌ಕುಮಾರ್ ಒಂದು ನೆನಪು:

ಆಶಯ ಭಾಷಣ

ಡಾ. ಬರಗೂರು ರಾಮಚಂದ್ರ,
ಸಾಹಿತಿಗಳು ಮತ್ತು ಚಿಂತಕರು

ಆಹ್ವಾನಿತರು:
ಎಂ. ಲಕ್ಷ್ಮೀನಾರಾಯಣ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

ಎನ್.ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

ವಿಶೇಷ ಆಹ್ವಾನಿತರು:

ಡಾ. ಶಿವರಾಜ್ ಕುಮಾರ್,
ರಾಘವೇಂದ್ರ ರಾಜ್‌ಕುಮಾರ್,
ಪುನೀತ್ ರಾಜ್‌ಕುಮಾರ್
ಮತ್ತು ಡಾ. ರಾಜ್‌ಕುಮಾರ್ ಕುಟುಂಬ ವರ್ಗ.

ದಿನಾಂಕ : 08-06-2017, ಗುರುವಾರ, ಸಮಯ: ಬೆಳಿಗ್ಗೆ 10.30 ಗಂಟೆಗೆ

ಸ್ಥಳ: ಮಹಾದೇವ ದೇಸಾಯಿ ಸಭಾಂಗಣ,
ಗಾಂಧಿ ಭವನ, ಕುಮಾರ ಪಾರ್ಕ್ ರಸ್ತೆ, ಬೆಂಗಳೂರು.

**ಪತ್ರಿಕಾ ಪ್ರಕಟಣೆ**

## ವಿಧಾನ ಪರಿಷತ್ತಿನಲ್ಲಿ ಇಂದು:

## ಕಂದಾಯ ಅದಾಲತ್‌ಗಳನ್ನು ನಡೆಸಿ ಆರ್.ಟಿ.ಸಿ. ತಿದ್ದುಪಡಿ ಕೆಲಸ

ಬೆಂಗಳೂರು, ಜೂನ್ 7, (ಕರ್ನಾಟಕ ವಾರ್ತೆ)

ಕಂದಾಯ ಅದಾಲತ್ ನಡೆಸಿ ಆರ್.ಟಿ.ಸಿ.ಯನ್ನು ತಿದ್ದುಪಡಿ ಕೆಲಸವನ್ನು ತ್ವರಿತವಾಗಿ ಮಾಡುತ್ತಿದ್ದೇವೆ ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ತಿಳಿಸಿದರು.

ಇಂದು ಪ್ರಶ್ನೋತ್ತರ ವೇಳೆಯಲ್ಲಿ ವಿಧಾನ ಪರಿಷತ್ ಸದಸ್ಯ ಬಸನಗೌಡ ಆರ್. ಪಾಟೀಲ್ ಅವರ ಪ್ರಶ್ನೆಗೆ ಸಚಿವರು ಉತ್ತರಿಸುತ್ತಾ ಅಳತೆಯಾದ ನಂತರ ಕಂಡುಬಂದ ತಕರಾರುಗಳನ್ನು ಅದಾಲತ್ ಅಳತೆ ನಂತರದ ತಕರಾರು ಪ್ರಕರಣಗಳನ್ನು ನಿಯಮಾನುಸಾರ ಶ್ರೀಘವಾಗಿ ಇತ್ಯರ್ಥಪಡಿಸಿ, ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸದನಕ್ಕೆ ತಿಳಿಸಿದರು.

ಕಡತ ನಿರ್ವಹಣೆಯಲ್ಲಿ ಯಾವುದೇ ಹಂತದಲ್ಲಿ ಭೂಮಾಪಕರೂ ವಿಳಂಬ ಧೋರಣೆ ಅನುಸರಿಸುತ್ತಿರುವುದು ಮೋಜಿಣಿ ವ್ಯವಸ್ಥೆಯಲ್ಲಿ ಕಂಡುಬಂದಲ್ಲಿ ಇಲಾಖಾ ವತಿಯಿಂದ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಎಸ್‌ಎಂ:ಕೆಎನ್‌ವಿ:ಜಿಪಿಆರ್

## ನೂತನ 49 ತಾಲ್ಲೂಕುಗಳಲ್ಲಿ ಶೀಘ್ರವೇ ಆಡಳಿತ ಪ್ರಾರಂಭ

ಬೆಂಗಳೂರು, ಜೂನ್ 7, (ಕರ್ನಾಟಕ ವಾರ್ತೆ)

ನೂತನವಾಗಿ ಘೋಷಣೆ ಮಾಡಿರುವ 49 ತಾಲ್ಲೂಕುಗಳಲ್ಲಿ ಆಡಳಿತ ಪ್ರಾರಂಭಿಸಲು ಸರ್ಕಾರ ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಂಡಿದೆ. ಈ ಕೆಲಸ ಶ್ರೀಘ್ರದಲ್ಲಿಯೇ ಕಾರ್ಯಗತವಾಗುವುದು ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಅವರು ತಿಳಿಸಿದರು.

ಇಂದು ಸದನದಲ್ಲಿ ಎನ್.ಎಸ್. ಬೋಸರಾಜು ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸುತ್ತಾ ಹೊಸ ತಾಲ್ಲೂಕುಗಳ ಆಡಳಿತ ಪ್ರಾರಂಭಿಸಲು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆ. ಪ್ರಸ್ತಾವನೆಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಜಿಲ್ಲಾಧಿಕಾರಿಗಳಿಂದ

ಪ್ರಸ್ತಾವನೆಗಳು ಸ್ವೀಕೃತವಾದ ನಂತರ ಪರಿಶಿಲಿಸಿ ಶ್ರೀಘ್ರವೇ ಆಡಳಿತ ಪ್ರಾರಂಭ ಮಾಡುತ್ತವೆ ಎಂದು ಹೇಳಿದರು.

ಎಸ್‌ಎಂ:ಕೆಎನ್‌ವಿ:ಜಿಪಿಆರ್

# ದೇವಾಲಯಗಳಲ್ಲಿ ಸಂಗ್ರಹವಾದ ಆದಾಯ ಆಯಾಯ ದೇವಾಲಯಗಳ ಅಭಿವೃದ್ಧಿಗೆ

ಬೆಂಗಳೂರು, ಜೂನ್ 7, (ಕರ್ನಾಟಕ ವಾರ್ತೆ)

ದೇವಾಲಯಗಳಲ್ಲಿ ಸಂಗ್ರಹವಾದ ಆದಾಯವನ್ನು ಆಯಾಯ ದೇವಾಲಯಗಳ ಸಂಬಂಧಿಸಿದ ಖಾತೆಯಲ್ಲಿ ಸಂಗ್ರಹಿಸಿ ಆಯಾಯ ದೇವಾಲಯದ ಅಭಿವೃದ್ಧಿಗೆ ಬಳಸಲಾಗುವುದು ಎಂದು ಜವಳಿ ಹಾಗೂ ಮುಜರಾಯಿ ಸಚಿವ ರುದ್ರಪ್ಪ ಮಾನಪ್ಪ ಲಮಾಣಿಯವರು ತಿಳಿಸಿದರು.

ಇಂದು ವಿಧಾನ ಪರಿಷತ್‌ನ ಕಲಾಪದ ವೇಳೆಯಲ್ಲಿ ಸದಸ್ಯ ಭಾನುಪ್ರಕಾಶ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಭಕ್ತಾಧಿಗಳಿಂದ ಸಂಗ್ರಹವಾದ ಹಣವನ್ನು ರಥೋತ್ಸವ, ಸಿಬ್ಬಂದಿ ವೆಚ್ಚ, ಮುಂತಾದ ಅಭಿವೃದ್ಧಿ ಕಾರ್ಯಗಳು, ದೇವಾಲಯದ ವತಿಯಿಂದ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯ ಇತ್ಯಾದಿಗಳನ್ನು ಒದಗಿಸಲು ಕರ್ನಾಟಕ ಹಿಂದೂ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997 ರ ಕಾಯ್ದೆಯ ಕಲಂ 36 (1) ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತಿದೆ ಎಂದು ಹೇಳಿದರು.

ಎಸ್‌ಎಂ:ಕೆಎನ್‌ವಿ:ಜಿಪಿಆರ್

## ವಿಧಾನ ಸಭೆಯಲ್ಲಿ ಇಂದು:

# ಗಾಂಧೀಜಿಯವರಿಗೆ ವಿಶೇಷ ನಮನ

ಬೆಂಗಳೂರು, ಜೂನ್ 7, (ಕರ್ನಾಟಕ ವಾರ್ತೆ)

ರಾಷ್ಟ್ರಪಿತ ಮಹಾತ್ಮ ಗಾಂಧಿಯವರನ್ನು 07-06-1893 ರಂದು ದಕ್ಷಿಣ ಆಫ್ರಿಕಾದ ಪೀಟರ್ಸ್ ಬರ್ಗ್ ರೈಲ್ವೆ ನಿಲ್ದಾಣದಲ್ಲಿ ರೈಲ್ವೆ ಬೋಗಿಯಿಂದ ಹೊರದಬ್ಬಿದ ಘಟನೆ ನಡೆದು 125 ವರ್ಷವಾದ ಇಂದು ಗಾಂಧೀಜಿಯವರಿಗೆ ಸದನವು ವಿಶೇಷ ನಮನ ಸಲ್ಲಿಸುವುದರೊಂದಿಗೆ ಬೆಳಗಿನ ಕಲಾಪವನ್ನು ಆರಂಭಿಸಲಾಯಿತು.

2017ನೇ ಸಾಲಿನ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ವಿಧೇಯಕವನ್ನು (ಜಿಎಸ್‌ಟಿ) ಹಾಗೂ 2017ನೇ ಸಾಲಿನ ಕರ್ನಾಟಕ ಮಾರಾಟಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದರು.

ಅಂದಾಜು ಸಮಿತಿಯ ಅಧ್ಯಕ್ಷರಾದ ಮಾಲೀಕಯ್ಯ ಗುತ್ತೇದಾರ್ ಅವರು 2016-17ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಅಂದಾಜುಗಳ 6ನೇ ವರದಿಯನ್ನು ಒಪ್ಪಿಸಿದರು.

ನಿಯಮ 304 ರಡಿ ಮಾತನಾಡಿದ ಜಲಸಂಪನ್ಮೂಲ ಸಚಿವರಾದ ಎಂ.ಬಿ. ಪಾಟೀಲ, ರಾಜ್ಯದ ಜನತೆ ಮತ್ತು ಜಾನುವಾರುಗಳ ಹಿತದೃಷ್ಟಿಯಿಂದ ಮಾತೃ ಸಮಾನರಾದ ಕೃಷ್ಣಾ ಮತ್ತು ಕಾವೇರಿಯನ್ನು ಪೂಜಿಸುವುದು ನಮ್ಮ ನಾಡಿದ ಸಂಸ್ಕೃತಿಯೇ ಹೊರತು ಮೌಢ್ಯವಲ್ಲ ಎಂದರು.

ದೊಡ್ಡಬಳ್ಳಾಪುರ ಶಾಸಕ ವೆಂಕಟರಮಣಯ್ಯ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಆರ್. ವಿ. ದೇಶಪಾಂಡೆ, ಕೆ. ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಿಂದ ಅಪರಲ್ ಪಾರ್ಕ್‌ಗೆ ಲಿಂಕ್ ರಸ್ತೆ ಅಭಿವೃದ್ಧಿಪಡಿಸಲು ಪ್ರಾಥಮಿಕ ಸರ್ವೆ ಕಾರ್ಯ ಕೈಗೊಂಡಿದ್ದು, ಪ್ರಸ್ತಾವನೆ ಅನ್ವಯ ರಸ್ತೆಯ ಉದ್ದ 160 ಮೀಟರ್ ಮತ್ತು ಅಗಲ 15 ಮೀಟರ್ ಆಗಿರುತ್ತದೆ. ಸದರಿ ರಸ್ತೆಗೆ ಅವಶ್ಯವಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡು ರಸ್ತೆ ನಿರ್ಮಿಸಲಾಗುವುದು ಎಂದರು.

ಪಾವಗಡ ಶಾಸಕ ತಿಮ್ಮರಾಯಪ್ಪನವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಹೆಚ್. ಕೆ. ಪಾಟೀಲರು ಪಾವಗಡ ತಾಲ್ಲೂಕಿಗೆ ಶಾಶ್ವತ ಕುಡಿಯುವ ನೀರನ್ನು ಒದಗಿಸುವ ಸಲುವಾಗಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆ (ಡಿಬಿಒಟಿ) ಯನ್ನು ಕೈಗೆತ್ತಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ. ಅದಕ್ಕೆ ಸಂಬಂಧಿಸಿದ ಆರ್ಥಿಕ, ಯೋಜನಾ ಜಲಸಂಪನ್ಮೂಲ, ನಗರಾಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಸಹಮತಿ ಪಡೆದು ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು ಎಂದರು.

ರಾಯಭಾಗ ಶಾಸಕ  ಐಹೊಳೆ ದುರ್ಯೋಧನ ಮಹಾಲಿಂಗಪ್ಪ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ತನ್ವೀರ್ ಸೇಠ್ ಅವರು ಬೆಳಗಾವಿ ಜಿಲ್ಲೆ ರಾಯಭಾಗ ಮತಕ್ಷೇತ್ರದಲ್ಲಿ ಸದರಿ ಇರುವ ಸರ್ಕಾರಿ ಗಂಡು ಮಕ್ಕಳ ಶಾಲೆಯನ್ನು ಶಾಸಕರ ಮಾದರಿ ಶಾಲೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ ಎಂದರು.

ಎಸ್‌ಎಂ:ಕೆಎನ್‌ಕೆ:ಜೆಡಿ:ಜಿಪಿಆರ್.

ಎಂಡೋಸಲ್ಫಾನ್ ಸಂತ್ರಸ್ತರಿಗೆ ಹೆಚ್ಚಿನ ಸೌಲಭ್ಯ:

ವಿಧಾನ ಸಭಾ ಸದಸ್ಯರಾದ ಸುನಿಲ್‌ಕುಮಾರ್ ಅವರು ರಾಜ್ಯದಲ್ಲಿ ಎಂಡೋಸಲ್ಫಾನ್ ಪೀಡಿತ 10,000 ಕ್ಕೂ ಹೆಚ್ಚು ಜನರಿಗೆ ಸರ್ಕಾರ ಸೌಲಭ್ಯ ಒದಗಿಸುವಂತೆ ನಿಯಮ 69 ರ ಅಡಿಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ರಮೇಶ್‌ಕುಮಾರ್, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಗೇರು ತೋಟಗಳಿಗೆ 1980–81 ರಿಂದ 2000–2001 ಅವಧಿಯಲ್ಲಿ ಎಂಡೋಸಲ್ಫಾನ್ ಕ್ರಿಮಿನಾಶಕವನ್ನು ಸರಿಪಡಿಸಿ ಮಾಡಿದ್ದರಿಂದ ಆ ಭಾಗದ ಜನರು ವಿಕಲಚೇತನರಾಗಿದ್ದಾರೆ.

ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಸರ್ಕಾರ ಈ ಅವಘಡದಲ್ಲಿ ಗುರುತಿಸಲ್ಪಟ್ಟ ಶೇ. 25 ರಿಂದ 59 ರಷ್ಟು ವಿಕಲತೆ ಹೊಂದಿರುವವರರಿಗೆ  ಮಾಸಿಕ 1500 ರೂ. ಹಾಗೂ ಶೇ. 60 ಕ್ಕೂ ಮೇಲ್ಪಟ್ಟ ವಿಫಲತೆಗೆ ಒಳಗಾದ 4108 ಸಂತ್ರಸ್ತರಿಗೆ 3000 ರೂ. ಮಾಸಾಶನ ಹಾಗೂ ಶೇ. 25 ಕ್ಕೂ ಕಡಿಮೆ ವಿಕಲತೆ ಹೊಂದಿದ 868 ಸಂತ್ರಸ್ತರಿಗೆ ಆರೋಗ್ಯ ಸೌಲಭ್ಯಗಳನ್ನು ವಿತರಿಸಲಾಗುತ್ತಿದೆ ಎಂದರು.

ಈ ಭಾಗಗಳಲ್ಲಿ ಎಂಡೋಸಲ್ಫಾನ್ ಪೀಡಿತರು ಒಟ್ಟು 6950 ಜನರಿದ್ದಾರೆ.  ಎಲ್ಲಾ ಸಂತ್ರಸ್ತರಿಗೂ ಗುರುತಿನ ಚೀಟಿ  ಚಿಕಿತ್ಸೆ ನೀಡಲಾಗುತ್ತಿದೆ ಹಾಗೂ ವೈದ್ಯಕೀಯ ಶಿಬಿರ ನಡೆಸುವುದರ ಜೊತೆಗೆ ಜಿಲ್ಲೆಯ ಖಾಸಗಿ ಸೂಪರ್ ಸ್ಪೆಷಾಲಟಿ ಆಸ್ಪತ್ರೆಗಳಲ್ಲಿ ಶುಲ್ಕರಹಿತ ಚಿಕಿತ್ಸೆ ನೀಡಲಾಗುತ್ತಿದೆ.  ಮಣಿಪಾಲ್ ಮೆಡಿಕಲ್ ಸೆಂಟರ್ ಸೇರಿದಂತೆ ಉಡುಪಿ ಹಾಗೂ ಮಂಗಳೂರಿನಲ್ಲಿ ಉತ್ತಮ ಚಿಕಿತ್ಸೆಗೆ ಶಿಫಾರಸ್ಸು ಮಾಡಲಾಗಿದೆ.

ಸಂತ್ರಸ್ತರಿಗೆ ಸಾಮಾನ್ಯ ಸಾರಿಗೆಯಲ್ಲಿ ಪ್ರಯಾಣಿಸಲು ಕೆ.ಎಸ್.ಆರ್.ಟಿ.ಸಿ. ಯಿಂದ ಉಚಿತ ಬಸ್‌ಪಾಸ್ ನೀಡಲಾಗುತ್ತಿದೆ ಜೊತೆಗೆ ಕೌಶಲ್ಯ ತರಬೇತಿ ಕೇಂದ್ರವನ್ನು ಸಧ್ಯದಲ್ಲೇ ಆರಂಭಿಸಲಾಗುವುದು ಎಂದರು.

ಶೀಘ್ರದಲ್ಲಿ ಸಂಬಂಧಪಟ್ಟ ಶಾಸಕರು ಅಧಿಕಾರಿಗಳೊಂದಿಗೆ ಸಂತ್ರಸ್ತರ ಮನೆಗಳಿಗೆ ತೆರಳಿ ಚರ್ಚಿಸಿ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಸರ್ಕಾರದ ವತಿಯಿಂದ ಮಂಜೂರು ಮಾಡಲಾಗುವುದು ಎಂದು ಭರವಸೆ ನೀಡಿದರು.

## ಆರು ದಿನಗಳ "ಹೈನುಗಾರಿಕೆ ಹಾಗೂ ಮೇವು ಉತ್ಪಾದನೆ" ತರಬೇತಿ

ಬೆಂಗಳೂರು, ಜೂನ್ 7, (ಕರ್ನಾಟಕ ವಾರ್ತೆ)

ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ ಜೂನ್ 19 ರಿಂದ 24 ರವರೆಗೆ ಒಟ್ಟು ಆರು ದಿನಗಳ ಹೈನುಗಾರಿಕೆ ಪ್ರಾರಂಭಿಸಲು ಆಸಕ್ತಿಯುಳ್ಳ ರೈತರಿಗೆ, ರೈತ ಮಕ್ಕಳಿಗೆ ಹಾಗೂ ರೈತ ಮಹಿಳೆಯರಿಗೆ "ಹೈನುಗಾರಿಕೆ ಹಾಗೂ ಮೇವು ಉತ್ಫಾದನೆ" ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ ತರಬೇತಿ ಅವಧಿಯಲ್ಲಿ ಊಟ ಮತ್ತು ಪ್ರಯಾಣದ ವೆಚ್ಚವನ್ನು ಅಭ್ಯರ್ಥಿಗಳೇ ಭರಿಸಬೇಕು. ತರಬೇತಿ ಅವಧಿಯಲ್ಲಿ ವಿದ್ಯಾರ್ಥಿ ನಿಲಯದಲ್ಲಿ ಉಳಿದುಕೊಳ್ಳಲು ಇಚ್ಛಿಸಿದರೆ ದಿನವೊಂದಕ್ಕೆ 25 ರೂ. ನಂತೆ ವಸತಿ ಶುಲ್ಕ ಪಾವತಿಬೇಕು.

ತರಬೇತಿ ಪಡೆಯುವವರು ಆಧಾರ್ ಕಾರ್ಡ್ ಪ್ರತಿ ಹಾಗೂ ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಜೂನ್ 19 ರ ಬೆಳಿಗ್ಗೆ 9.30 ಗಂಟೆಗೆ ನೇರವಾಗಿ ಹಾಜರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಉಪ ನಿರ್ದೇಶಕರು (ತರಬೇತಿ), ಇವರನ್ನು ನೇರವಾಗಿ ಅಥವಾ ದೂರವಾಣಿ ಮುಖೇನ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ. ಕಚೇರಿ ದೂರವಾಣಿ ಸಂಖ್ಯೆ : 080–28466397.

**ಎಸ್‌ಎಂ:ಜೆಡಿ:ಜಿಪಿಆರ್**

## ಪರಿಸರ ಅಭಿಯಂತರರು ಹುದ್ದೆಗಳ
## ನಿರ್ದಿಷ್ಟ ಪತ್ರಿಕೆಯ ಮರು ಪರೀಕ್ಷೆ

ಬೆಂಗಳೂರು, ಜೂನ್ 7, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಸಹಾಯಕ ಅಭಿಯಂತರರು (ಸಿವಿಲ್), ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿನ ಭೂದಾಖಲೆಗಳ ಸಹಾಯಕ ನಿರ್ದೇಶಕರು ಹಾಗೂ ಪೌರಾಡಳಿತ ನಿರ್ದೇಶನಾಲಯದಲ್ಲಿನ ಪರಿಸರ ಅಭಿಯಂತರ ಹುದ್ದೆಗಳಿಗೆ ಮೇ 26 ರಂದು ಪೂರ್ವಾಹ್ನ ಹಾಗೂ ಅಪರಾಹ್ನ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗಿತ್ತು.

ಈ ಪರೀಕ್ಷೆಗಳಲ್ಲಿ ಹಿಂದಿನ ಸಾಲಿನ ಪ್ರಶ್ನೆಗಳು ಪುನರಾವರ್ತನೆಯಾಗಿರುವ ಬಗ್ಗೆ ಬಂದ ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಆಯೋಗವು ಜೂನ್ 6 ರಂದು ನಡೆದ ಸಭೆಯಲ್ಲಿ ಸಂಬಂಧಿತರನ್ನು ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆ ನಡೆಸಲು ಆದೇಶಿಸಿ ಸಮಿತಿಯನ್ನು ರಚಿಸಿದೆ.

ಜುಲೈ 2 ರಂದು ಪೂರ್ವಾಹ್ನ ಸಹಾಯಕ ಅಭಿಯಂತರರು (ಸಿವಿಲ್) ಮತ್ತು ಅಪರಾಹ್ನ ಪರಿಸರ ಅಭಿಯಂತರರು ಹುದ್ದೆಗಳ ನಿರ್ದಿಷ್ಠ ಪತ್ರಿಕೆಯ ಮರು ಪರೀಕ್ಷೆಯನ್ನು ನಡೆಸಲು ನಿರ್ಧರಿಸಿದೆ.

ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಬಗೆಗಿನ ಮಾಹಿತಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಕರ್ನಾಟಕ ಲೋಕಸೇವಾ ಅಯೋಗದ ಪ್ರಕಟಣೆ ತಿಳಿಸಿದೆ.

**ಎಸ್‌ಎಂ:ಜೆಡಿ:ಜಿಪಿಆರ್**